ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 28-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

ಡಾ. ಪ್ರಮೀನ್ ಚೆರಿಯಾ ಮತ್ತು ನನ್ನ ನಡುವೆ ಯಾವುದೇ ವ್ಯವಹಾರ ಇಲ್ಲ . ನನ್ನ ಅಣ್ಣ ಒಂದನೇ ಪ್ರತಿವಾದಿ ಮತ್ತು ಡಾ. ಪ್ರಮೀನ್ ಚೆರಿಯಾ ನಡುವೆ ವ್ಯವಹಾರಿಕ ಸಂಬಂಧ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ . Medical Transmission ಬಗ್ಗೆ ನನ್ನ ಅಣ್ಣ ಒಂದನೇ ಪ್ರತಿವಾದಿ ಮತ್ತು ಸದ್ರಿ ಡಾ. ಪ್ರಮೀನ್ ಚೆರಿಯಾ ನಡುವೆ ವ್ಯವಹಾರ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಣ್ಣ ಸದ್ರಿ ಡಾ. ಪ್ರಮೀನ್ ಚೆರಿಯಾ ರವರಿಗೆ ಸಂಭಾವನೆ ಕೊಡುತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಹಣವನ್ನು ಡಾಲರ್ ರೂಪದಲ್ಲಿ ಕಳುಹಿಸುತಿದ್ದರು ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿಗೆ 2 ಬ್ಯಾಂಕ್ ಚಲನ್ ಗಳನ್ನು ತೋರಿಸಿ ಅದರಲ್ಲಿ ಸದ್ರಿ ಡಾ. ಪ್ರಮೀನ್ ಚೆರಿಯಾ ನನ್ನ ಖಾತೆಗೆ ಹಣ ಹಾಕಿದ ಬಗ್ಗೆ ಕಂಡುಬರುತಿದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಆದ್ದರಿಂದ ಅದನ್ನು ನಿಶಾನೆಯನ್ನಾಗಿ ಮಾಡಿರುವುದಿಲ್ಲ. ನನಗೂ ಈ ಹಣಕ್ಕೂ ಯಾವುದೇ ಸಂಬಂಧ ಇಲ್ಲ ನನ್ನ ಅಣ್ಣನನ್ನೇ ಕೇಳಬೇಕು ಕಾರಣ ಆ ಸಮಯದಲ್ಲಿ ನನ್ನ ವ್ಯವಹಾರವನ್ನು ಅವರೇ ಮಾಡುತಿದ್ದರು ಎಂದು ತಿಳಿಸಿರುತ್ತಾರೆ. 2 ನೇ ಪ್ರತಿವಾದಿ ನಂದಾಗೋಪಾಲ್ ಕೊಡ್ಗಿ ರವರು OS no.264/2019 ರಂತೆ ಕುಂದಾಪುರ ನ್ಯಾಯಲಯದಲ್ಲಿ ನನ್ನ ಮತ್ತು ಇತರರ ವಿರುದ್ಧ ಅಮಾಸೆಬೈಲಿನ ಆಸ್ತಿಗಳ ಬಗ್ಗೆ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ . ನನಗೆ ಸದ್ರಿ ದಾವೆಯ ಸಮನ್ಸ್ ಬಂದಿತ್ತೋ ಇಲ್ಲವೋ ನೆನಪಿಲ್ಲ. ಯಾವ ಆಸ್ತಿಗಳ ಬಗ್ಗೆ ನಂದಾಗೋಪಾಲ್ ಪಾಲು ಕೇಳಿದ್ದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಸರ್ವೆ ನಂ 73/8 ರಲ್ಲಿ 1 ಎಕ್ರೆ 61 ಸೆಂಟ್ಸ್ ನಿಮ್ಮ ಕುಟುಂಬದ ಆಸ್ತಿಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಸದ್ರಿ ಸರ್ವೆ ನಂಬರ್ ನ ಬಗ್ಗೆ ದಾಖಲೆ ನೋಡಿ

ಹೇಳಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ. ನಾನು ಈಗ ಹೇಳಿದ ಸರ್ವೇ ನಂಬರ್ ನಲ್ಲಿ ಭಾಗ ಕೇಳುತಿಲ್ಲ .

ಕಾಶಮ್ಮ ನ ಹೆಸರಿನಲ್ಲಿ ಈಗ ಆಸ್ತಿಗಳು ಇದೆಯೋ ಇಲ್ಲವೋ ಗೊತ್ತಿಲ್ಲ ಆದರೇ ಮೊದಲು ಇತ್ತು . ಅವರು ಯಾವಾಗ ಖರೀದಿಸಿದ್ದಾರೆ ಎಂದು ನನಗೆ ನೆನಪಿಲ್ಲ . 10-04-1999 ರಂದು ಕಾಶಮ್ಮ ನವರು ನಿಪಿ 81 ರ ಆಸ್ತಿಯನ್ನು ಖರೀದಿಸಿದ್ದರು ಎಂದರೆ ಇರಬಹುದು . ನಿಪಿ 82 ಕ್ರಯಪತ್ರದ ಮೂಲಕ 23-07-2002 ರಂದು ಕಾಶಮ್ಮ ರವರು ದಾವಾ ಬಿ ಶೆಡೂಲ್ ನ ಮತ್ತೊಂದು ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ಸರಿ . ಸದ್ರಿ ಸ್ವತ್ತುಗಳು ಕಾಶಮ್ಮ ರವರ ಸ್ವಯಾರ್ಜಿತ ಸ್ವತ್ತಾ ಮತ್ತು ಇಚ್ಚೆಗೆ ಅನುಸಾರವಾಗಿ ಅವರು ಬೇರೆಯವರಿಗೆ ವರ್ಗಾವಣೆ ಮಾಡುವ ಸ್ವತ್ತಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ಕುಟುಂಬದ ಸ್ವತ್ತುಗಳು ಎಂದು ತಿಳಿಸಿರುತ್ತಾರೆ. ಕಾಶಮ್ಮ ರವರು ಯಾವ ಹಣದಿಂದ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ . ಸದ್ರಿ ಕಾಶಮ್ಮ ಕುಟುಂಬದ ಆದಾಯದಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ಕಲ್ಲಡ್ಕ ದ ಆಸ್ತಿಗಳು ಕಾಶಮ್ಮ ನ ಗಂಡನ ಆಸ್ತಿಗಳಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಗಂಡನ ಆಸ್ತಿ ಎಂದು ತಿಳಿಸಿರುತ್ತಾರೆ . ಕಾಶಮ್ಮ ನ ಗಂಡನ ಹೆಸರು ವೆಂಕಟರಮಣಯ್ಯ ಯಾನೆ ಮಾಣಿ . ಕಾಶಮ್ಮ ನ ಗಂಡ 1941 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ನೆನಪಿಲ್ಲ . ನಾವು ಹಿಂದೂ ಮಿತಾಕ್ಷರ ಪದ್ದತಿಯನ್ನು ಅನುಸರಿಸುವರು. ನಾನು ಹೇಳುವಂತೆ ನಮ್ಮದು ಅಳಿಯ ಸಂತಾನ ಕುಟುಂಬವಲ್ಲ ಎಂದರೆ ಸರಿ. ಕಾಶಮ್ಮ ಅವರ ಗಂಡನ ಹಿಂದೂ ಮಿತಾಕ್ಷರ ಕುಟುಂಬಕ್ಕೆ ಸೇರಿದವರು ಎಂದರೆ ಇರಬಹುದು. ಕಾಶಮ್ಮ ಹಿಂದೂ ಮಿತಾಕ್ಷರ ಕುಟುಂಬ ಮತ್ತು ನಾನು ಹೇಳುವಂತಹ ಹಿಂದೂ ಮಿತಾಕ್ಷರ ಕುಟುಂಬ ಬೇರೆ ಬೇರೆಯಾ ಅಥವಾ ಒಂದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಂದೇ ಇರಬಹುದು ಎಂದು ತಿಳಿಸಿರುತ್ತಾರೆ . ನಾನು

ಹೇಳುವಂತಹ ಹಿಂದೂ ಮಿತಾಕ್ಷರ ಕುಟುಂಬ ಎಷ್ಟು ತಲೆಮಾರಿನ ಕುಟುಂಬ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ತಿಳಿದುಕೊಂಡು ಹೇಳಬೇಕು ಎಂದು ತಿಳಿಸಿರುತ್ತಾರೆ . ನಾನು ಹೇಳುವಂತಹ ಹಿಂದೂ ಮಿತಾಕ್ಷರ ಕುಟುಂಬದ ಸಂತತಿ ನಕ್ಷೆ ಹೇಳುತೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ 2 ತಲೆ ಅಂದರೆ ನನ್ನ ತಂದೆ ಚಂದ್ರಶೇಖರ ಅವರ ತಂದೆ ಸರ್ವೋತ್ತಮ ಮತ್ತು ಅವರ ತಂದೆ ಗೋವಿಂದರಾಯ ಎಂದು ತಿಳಿಸಿರುತ್ತಾರೆ . ನಮ್ಮ ದಾವೆಯಲ್ಲಿ ನಮ್ಮ ಕುಟುಂಬದ ಸಂತತಿ ನಕ್ಷೆ ಕೊಟ್ಟಿಲ್ಲ . ಕಾಶಮ್ಮ ನಾನು ಹೇಳುವಂತಹ ನಮ್ಮ ಕುಟುಂಬದ ಯಾವ ತಲೆಮಾರಿನಲ್ಲಿ ಬರುತ್ತಾರೆ ಎಂದು ನನಗೆ ನೋಡಿ ಹೇಳಬೇಕಾಗುತ್ತದೆ . ನಾನು ಹೇಳುವಂತಹ ಹಿರಿಯರ ಮಹಾಲಯವನ್ನು ಹಿರಿಯರು ಅಂದರೆ ನನ್ನ ದೊಡ್ಡಪ್ಪ ಎಜಿ ಕೊಡ್ಗಿ ನಂತರ ರವೀಂದ್ರ ನಾಥ್ ಕೊಡ್ಗಿ ಮಾಡುತಿದ್ದರು ಮತ್ತು ಈಗ ಅವರ ಮಗ ದಿವಾನಂದ ಕೊಡ್ಗಿ ಮಾಡುತಿದ್ದಾರೆ . ನಾನು ಅವರ ಮನೆಗೆ ಮಹಾಲಯ ಊಟಕ್ಕೆ ಹೋಗುತಿದ್ದೆ . ಯಾರು ಯಾರಿಗೆ ಏನು ತರ್ಪಣ ಬಿಡಬೇಕು ಎಂದು ಪಟ್ಟಿ ಮಾಡಿದ್ದನ್ನು ನಾನು ನೋಡಿಲ್ಲ . ಕಾಶಮ್ಮನಿಗೆ ಮತ್ತು ಅವರ ಗಂಡನಿಗೆ ಮಹಾಲಯದಲ್ಲಿ ತರ್ಪಣ ಬಿಟ್ಟಿರಬಹುದು. ನಮ್ಮ ಕುಟುಂಬದ ಸಂತತಿ ನಕ್ಷೆ ಕೊಡದೇ ಇರಲು ಯಾವುದೇ ಕಾರಣ ಇಲ್ಲ . ನಾನು ಹೇಳುವಂತಹ ಹಿಂದೂ ಅವಭಕ್ತ ಕುಟುಂಬ ಅಸ್ತಿತ್ವದಲ್ಲೇ ಇಲ್ಲ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ನಾನು ಸಂತತಿ ನಕ್ಷೆಯನ್ನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ . ಕಾಶಮ್ಮ 1998-99 ರಲ್ಲಿ ಅವರಿಗೆ ಸೇರಿದ ಸ್ವಲ್ಪ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ನೆನಪಿಲ್ಲ. ಕಾಶಮ್ಮ ಮಾರಾಟ ಮಾಡಿದ ಕ್ರಯಪತ್ರಗಳನ್ನು ನಾನು ನ್ಯಾಯಲಯಕ್ಕೆ ಹಾಜರುಪಡಿಸಿಲ್ಲ, ಅವು ನನ್ನ ಅಣ್ಣನ ಬಳಿ ಇದೆ . ನಿಪಿ 56 ರಲ್ಲಿ ಕಾಣುವ ಆಸ್ತಿಗಳನ್ನು ನನ್ನ ಅಣ್ಣ ಮತ್ತು ನನ್ನ ಅಜ್ಜಿ ಸೇರಿ ಮಾರಾಟ ಮಾಡಿರುತ್ತಾರೆ . ಸದ್ರಿ ದಾಖಲೆಗಳನ್ನು ನನ್ನ ಎಜೆಂಟ್ ತೆಗೆದಿರುತ್ತಾರೆ . ಅದರ ಮಾರುಕಟ್ಟೆ ಮೌಲ್ಯ

ಎಷ್ಟು ಎಂದು ಗೊತ್ತಿಲ್ಲ ಆದರೇ 33 ಲಕ್ಷ ಕ್ಕೆ ಮಾರಾಟ ಆಗಿದೆ . ದುಡ್ಡು ತೆಗೆದುಕೊಳ್ಳುವುದನ್ನು ನಾನು ನೋಡಿದ್ದೇನೆ. ಆದ್ದರಿಂದ 33 ಲಕ್ಷ ಕ್ಕೆ ಮಾರಾಟವಾಗಿದೆ ಎಂದು ಹೇಳುತಿದ್ದೇನೆ . 33 ಲಕ್ಷಕ್ಕೆ ಮಾರಾಟವಾಗಿದೆ ಎಂಬ ವಿಚಾರವನ್ನು ಸಬ್ ರಿಜಿಸ್ಟ್ರಾರ್ ಗೆ ತಿಳಿಸಿಲ್ಲ, ನನ್ನ ಅಣ್ಣ ತಿಳಿಸಿದ್ದಾನೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. 33 ಲಕ್ಷ ಕ್ಕೆ ಮಾರಾಟವಾಗಿದೆ ಎಂಬ ವಿಚಾರವನ್ನು ನನ್ನ ದಾವೆಯಲ್ಲಿ ಹೇಳಿಲ್ಲ. ಆದರೇ ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದೇನೆ. 33 ಲಕ್ಷ ಕ್ಕೆ ಮಾರಾಟವಾಗಿದೆ ಎನ್ನುವ ಬಗ್ಗೆ ನನ್ನ ಬಳಿ ಆದಾರ ಇಲ್ಲ, ಆದರೇ ಹಣ ಕೊಡುವುದನ್ನು ನಾನು ನೋಡಿದ್ದೇನೆ. ಕಾಶಮ್ಮನಿಗೆ ಈ ದಾವೆಯ ಬಿ ಶೆಡೂಲ್ ಆಸ್ತಿಗಳನ್ನು ವಿಲ್ ಮಾಡುವ ಅಧಿಕಾರ ಇದ್ದಿರಬಹುದು . ಅವರಿಗೆ ನಿಗದಿತವಾಗಿ ಅಧಿಕಾರ ಇತ್ತೊ ಇಲ್ಲವೋ ಎಂದು ಹೇಳಲು ಸಾಧ್ಯವಿಲ್ಲ , ಇದ್ದಿರಬಹುದು . ಕಾಶಮ್ಮ ಬರೆದ ವಿಲ್ ನ ಆದಾರದ ಮೇಲೆ ನನಗೆ 1 ಮತ್ತು 2 ನೇ ಪ್ರತಿವಾದಿಗೆ ಹಕ್ಕು ಬಂದಿತ್ತು . 30-06-2007 ರಂದು ನಾನು ಮತ್ತು 2 ನೇ ಪ್ರತಿವಾದಿ 1 ನೇಪ್ರತಿವಾದಿಗೆ ರಿಲೀಸ್ ಡೀಡ್ ಮಾಡಿ ಕೊಟ್ಟಿದ್ದೇವೆ ಎಂದರೆ ಸರಿ . ಸಾಕ್ಷಿ ಮುಂದುವರಿದು ನನ್ನ ಅಣ್ಣ ಒಂದನೇ ಪ್ರತಿವಾದಿ ಬಿಲ್ಡಿಂಗ್ ಕಟ್ಟಬೇಕು ಮತ್ತು ಆಸ್ತಿಗಳನ್ನು ಅಬಿವೃದ್ದಿ ಮಾಡಬೇಕು, ಆದ್ದರಿಂದ ರಿಲೀಸ್ ಮಾಡಿಕೊಡಿ ಎಂದು ಹೇಳಿದ್ದರು ಆದರಿಂದ ಮಾಡಿಕೊಟ್ಟೆ ಎಂದು ತಿಳಿಸಿರುತ್ತಾರೆ . ನಾನು ಮತ್ತು 2 ನೇ ಪ್ರತಿವಾದಿ ಖುದ್ದಾಗಿ ಷದ್ರಿ ರಿಲೀಸ್ ಡೀಡ್ ನ್ನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಹಾಜರುಪಡಿಸಿ ಖುದ್ದಾಗಿ ಸಹಿ ಮಾಡಿಕೊಟ್ಟಿದ್ದೇವೆ ಎಂದರೆ ಸರಿ . ಸಬ್ ರಿಜಿಸ್ಟ್ರಾರ್ ರವರ ಮುಂದೆ ಒಪ್ಪಿ ನಾನು ಮತ್ತು 2 ನೇ ಪ್ರತಿವಾದಿ ರಿಲೀಸ್ ಡೀಡ್ ಗೆ ಸಹಿ ಮಾಡಿ ಹೆಬ್ಬೆಟ್ಟನ್ನು ಸಹ ಹಾಕಿದ್ದೇವೆ ಎಂದರೆ ಸರಿ . ಷದ್ರಿ ರಿಲೀಸ್ ಡೀಡ್ ಆದಾರದಲ್ಲಿ ದಾವಾ ಬಿ ಶೆಡೂಲ್ ಗೆ ಸಂಬಂದಪಟ್ಟ ಖಾತೆ ಒಂದನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಗಿದೆ ಎಂದರೆ ಸರಿ .

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.